ಈಗಾಗಲೇ ಕಲ್ಮಡ್ಡಿ ಯಾತ ನೀರಾವರಿ ಸಂಬಂಧ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದೆ. ಇದರಿಂದ ಸುಮಾರು 7200 ಕ್ಕೂ ಅಧಿಕ ಎಕರೆ ನೀರಾವರಿ ಪ್ರದೇಶವಾಗಲಿದೆ.
• **ಬಾಲಚಂದ್ರ ಜಾರಕಿಹೊಳಿ** ಶಾಸಕ



## ಪೌರ ಸಮಸ್ಯೆ

### ಟ್ರಾಫಿಕ್ ಸಿಗ್ನಲ್ ಅಳವಡಿಸಿ

ಹಿಂದವಾಡಿ, ಟಿಳಕವಾಡಿಗಳ ಸಂಪರ್ಕಿಸುವ ಬಸವೇಶ್ವರ ವೃತ್ತದಲ್ಲಿ ಸೂಕ್ತ ರೀತಿಯಲ್ಲಿ ಟ್ರಾಫಿಕ್ ಸಿಗ್ನಲ್‌ಗಳನ್ನು ಅಳವಡಿಸುವ ಅಗತ್ಯವಿದೆ. ಈ ರಸ್ತೆ ಹಲವು ಮಾರ್ಗಗಳ ಕೂಡು ರಸ್ತೆಯಾಗಿದೆ. ಈ ವೃತ್ತಕ್ಕೆ ಟಿಳಕವಾಡಿ, ಹಿಂದವಾಡಿ, ಆರ್‌ಪಿಡಿ ಸರ್ಕಲ್ ಸೇರಿದಂತೆ ಸುಮಾರು 100ಮೀಟರ್ ವ್ಯಾಪ್ತಿಯಲ್ಲಿ ನಾಲ್ಕು ರಸ್ತೆಗಳ ಸಂಪರ್ಕ ಕೊಂಡಿಯಾಗಿದೆ. ಈ ರಸ್ತೆ ಉತ್ತಮ ವಾಗಿರುವುದರಿಂದ ವೇಗವಾಗಿ ಸಾಗುವ ಚಾಲಕರು ನಿರ್ಲಕ್ಷ್ಯದಿಂದ ಸಾಗಿ ಅಪಘಾತಕ್ಕೆ ಕಾರಣರಾಗುತ್ತಿದ್ದಾರೆ. ಅಪಘಾತ ತಡೆಗೆ ಅದರಲ್ಲೂ ಪ್ರಮುಖವಾಗಿ ವೃತ್ತ ರಸ್ತೆಗಳಿಗೆ ಅಳವಡಿಸಬೇಕಾದ ಸಿಗ್ನಲ್ ಮತ್ತು ವೇಗ ನಿಯಂತ್ರಕಗಳನ್ನು ಈ ರಸ್ತೆಗೆ ಸಮರ್ಪಕವಾಗಿ ಅಳವಡಿಸಿಲ್ಲ. ಹೀಗಾಗಿ ಈ ಮಾರ್ಗದಲ್ಲಿ ಚಿಕ್ಕಪುಟ್ಟ ಅಪಘಾತಗಳು ಸರ್ವೆಸಾಮಾನ್ಯ ಎಂಬಂತಾಗಿದೆ. ಅಲ್ಲದೇ ಈ ರಸ್ತೆಯಲ್ಲಿ ಪಾದಚಾರಿಗಳು ಜೀವ ಕೈಯಲ್ಲಿ ಹಿಡಿದು ಸಂಚರಿಸುವಂತಾಗಿದೆ. ಕೂಡಲೇ ಸಂಚಾರ ಪೊಲೀಸರು ಸಮರ್ಪಕ ಸಿಗ್ನಲ್ ಅಳವಡಿಕೆಗೆ ಮುಂದಾಗಬೇಕು ಹಾಗೂ ಪಾಲಿಕೆ ಮತ್ತು ಲೋಕೋಪಯೋಗಿ ಇಲಾಖೆ ಸಿಬ್ಬಂದಿ ಇಲ್ಲಿ ತುರ್ತಾಗಿ ವೇಗನಿಯಂತ್ರಕಗಳನ್ನು ಹಾಕಬೇಕು.

• **ರೇಖಾ ಮಹಾಂತ**

# ಸಮುದಾಯ ಭವನಕ್ಕೆ ₹50ಲಕ್ಷ

## ಶ್ರಾವಣ ಮಾಸ ಕಾರ್ಯಕ್ರಮದಲ್ಲಿ ಶಾಸಕ ಬಾಲಚಂದ್ರ ಜಾರಕಿಹೊಳಿ

• **ಕನ್ನಡಪ್ರಭ ವಾರ್ತೆ** ಗೋಕಾಕ

ಮನ್ನಿಕೇರಿ ಮಹಾಂತೇಶ್ವರ ದೇವಸ್ಥಾನದ ಸಮುದಾಯ ಭವನ ನಿರ್ಮಾಣಕ್ಕೆ ₹ 50 ಲಕ್ಷ ಮಂಜೂರು ಮಾಡಿಸುವುದಾಗಿ ಶಾಸಕ ಬಾಲಚಂದ್ರ ಜಾರಕಿಹೊಳಿ ಅವರು ಭರವಸೆ ನೀಡಿದರು.

ತಾಲೂಕಿನ ಮನ್ನಿಕೇರಿ ಗ್ರಾಮದ ಮಹಾಂತೇಶ್ವರ ಮಠದಲ್ಲಿ ಶ್ರಾವಣ ಮಾಸದ ಸಮಾರೋಪದ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಈಗಾಗಲೇ ಅರಭಾವಿ ಮತಕ್ಷೇತ್ರದ ಸುಣಧೋಳಿ, ಅರಭಾವಿ, ಹುಣಶ್ಯಾಳ ಪಿಜಿ, ಕೌಜಲಗಿ, ಕುಲಗೋಡ, ತಳಕಟ್ನಾಳ, ಅರಭಾವಿ ಬಬಲಾದಿಮಠ, ಉದಗಟ್ಟಿ, ಕಲ್ಲೋಳಿ, ಅರಭಾವಿ ಮಠ, ಮುಂತಾದ ಪ್ರವಾಸಿ ತಾಣಗಳಿಗೆ ಪ್ರವಾಸೋದ್ಯಮ ಇಲಾಖೆಯಿಂದ ತಲಾ ₹ 50 ಲಕ್ಷ ವೆಚ್ಚದಲ್ಲಿ ಯಾತ್ರಿ ನಿವಾಸ ಕಾಮಗಾರಿ ಅನುಷ್ಠಾನಗೊಳಿಸಲಾಗಿದೆ. ಮನ್ನಿಕೇರಿ ಮಠದಲ್ಲಿಯೂ ಮದುವೆ ಹಾಗೂ ಇತರ ಧಾರ್ಮಿಕ ಕಾರ್ಯಗಳಿಗಾಗಿ ಸುಸಜ್ಜಿತ ಸಮುದಾಯ ಭವನ ನಿರ್ಮಿಸಿ ಕೊಡುವುದಾಗಿ ಭರವಸೆ ನೀಡಿದರು.

ಈಗಾಗಲೇ ಕಲ್ಮಡ್ಡಿ ಯಾತ ನೀರಾವರಿ ಸಂಬಂಧ ಸರ್ಕಾರಕ್ಕೆ ಪ್ರಸ್ತಾವಣೆ ಸಲ್ಲಿಸಲಾಗಿದೆ. ಸುಮಾರು 7200 ಕ್ಕೂ ಅಧಿಕಎಕರೆನೀರಾವರಿಪ್ರದೇಶವಾಗಲಿದೆ. ಈ ಯಾತ ನೀರಾವರಿ ಅನುಷ್ಠಾನ 'ಗೊಳಿಸಲು ನೂರು ಕೋಟಿ ಅನುದಾನ ಬಿಡುಗಡೆ ಮಾಡುವಂತೆ ಸಿಎಂ ಸಿದ್ದರಾಮಯ್ಯ ಅವರನ್ನು ಕೋರಿರುವುದಾಗಿ ಅವರು ತಿಳಿಸಿದರು.

ಮನ್ನಿಕೇರಿ ಗ್ರಾಮದ ಅಭಿವೃದ್ಧಿಗೆ ಈಗಾಗಲೇ ಸರ್ಕಾರದ ಹಲವಾರು ಪ್ರಗತಿಪರ ಕಾರ್ಯಗಳನ್ನು ಕೈಗೆತ್ತಿ ಕೊಳ್ಳಲಾಗಿದೆ. ಮನ್ನಿಕೇರಿ- ಹುಲಕುಂದ ರಸ್ತೆ ಕಾಮಗಾರಿಗೆ ₹ 2.30 ಕೋಟಿ ವಿನಿಯೋಗಿಸಿದ್ದು, ಕಾಮಗಾರಿ ಪ್ರಗತಿಯಲ್ಲಿದೆ. ಎಸ್‌ಸಿಪಿ, ಟಿಎಸ್‌ಪಿ ಯೋಜನೆಯಡಿ ಕಾಂಕ್ರೀಟ್ ರಸ್ತೆಯನ್ನು ನಿರ್ಮಿಸಲಾಗಿದೆ. ಅಲ್ಲದೇ ಪಿಡಬ್ಲ್ಯೂಡಿ ಇಲಾಖೆಯಿಂದ ₹ 40 ಲಕ್ಷ ಮತ್ತು ಜಿಆರ್‌ಬಿಸಿಯಿಂದ ₹ 25 ಲಕ್ಷ ಸೇರಿದಂತೆ ಒಟ್ಟು₹ 65 ಲಕ್ಷ ವೆಚ್ಚದಲ್ಲಿ ಎಸ್‌ಸಿಪಿ, ಟಿಎಸ್‌ಪಿ ಕಾಂಕ್ರೀಟ್ ರಸ್ತೆಯನ್ನು ಕೈಗೆತ್ತಿಕೊಳ್ಳಲಾಗಿದೆ ಎಂದು ಬಾಲಚಂದ್ರ ಜಾರಕಿಹೊಳಿ ತಿಳಿಸಿದರು.

ಶಾಸಕ ಬಾಲಚಂದ್ರ ಜಾರಕಿಹೊಳಿ ಅವರನ್ನು ಮನ್ನಿಕೇರಿ ಗ್ರಾಮಸ್ಥರ ಪರವಾಗಿ ಮಹಾಂತ ಸಿದ್ದೇಶ್ವರ ಸ್ವಾಮೀಜಿ ಸತ್ಕರಿಸಿದರು. ಮಹಾಂತ ಸಿದ್ದೇಶ್ವರ ಸ್ವಾಮೀಜಿ ಸಾನ್ನಿಧ್ಯ ವಹಿಸಿದ್ದರು. ಅನಂತ ನಾಯಿಕ, ಎಂ.ಎಂ. ಪಾಟೀಲ, ಜಿಪಂ ಮಾಜಿ ಸದಸ್ಯ ಪರಮೇಶ್ವರ ಹೊಸಮನಿ, ಅಡಿವೆಪ್ಪ ಅಳಗೋಡಿ, ಗ್ರಾಪಂ ಮಾಜಿ ಅಧ್ಯಕ್ಷ ಮುದಕಪ್ಪ ಗೋಡಿ, ಬಾಳಪ್ಪ ಗೌಡರ, ಸತ್ತೆಪ್ಪ ಗಡಾದ, ಲಕ್ಷ್ಮಣ ಗಡಾದ, ಮಹಾಂತೇಶ ಮೆಟ್ಟಿನ, ಪುಂಡಲೀಕ ದಳವಾಯಿ, ಬಸಪ್ಪ ನಾಯ್ಕ, ಮಹಾಂತಯ್ಯ ಹಿರೇಮಠ, ಡಿ.ಜೆ. ಮುಲ್ತಾನಿ ಇತರರು ಇದ್ದರು.



ಶಾಸಕ ಬಾಲಚಂದ್ರ ಜಾರಕಿಹೊಳಿ ಅವರನ್ನು ಮಣ್ಣಿಕೇರಿ ಗ್ರಾಮಸ್ಥರು ಸನ್ಮಾನಿಸಿದರು.

**ಮನ್ನಿಕೇರಿ, ಗೋಸಬಾಳ, ಕೌಜಲಗಿ, ಬಿಲಕುಂದಿ, ಖಂಡ್ರಟ್ಟಿ, ಕಪರಟ್ಟಿ ಗ್ರಾಮಗಳಿಗೆ ಅನುಕೂಲವಾಗಲು ಕಲ್ಮಡ್ಡಿ ಯಾತ ನೀರಾವರಿ ಯೋಜನೆಯನ್ನು ಅನುಷ್ಠಾನಗೊಳಿಸಲಾಗುವುದು.**
• **ಬಾಲಚಂದ್ರ ಜಾರಕಿಹೊಳಿ** ಶಾಸಕ

## 8 ರಂದು ಪಿಂಚಣಿ ಕಾರ್ಯಕ್ರಮ

**ರಾಮದುರ್ಗ:** ವಿವಿಧ ಸಾಮಾಜಿಕ ಪಿಂಚಣಿ ಯೋಜನೆಗಳ ಸಮರ್ಪಕ ಅನುಷ್ಠಾನಕ್ಕಾಗಿ ರಾಮದುರ್ಗ ತಾಲೂಕಿನ 4 ಹೋಬಳಿಗಳಲ್ಲಿ ಸಪ್ಟೆಂಬರ್ 8 ರಂದು ಪಿಂಚಣಿ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದು ತಹಸೀಲ್ದಾರ್ ತುಕಾರಾಮ ದಾಸರ ಪ್ರಕಟಣೆಯಲ್ಲಿ ತಿಳಿಸಿದ್ದಾರೆ. ಸುರೇಬಾನ ಹೋಬಳಿ ಮಟ್ಟದ ಸಭೆಯನ್ನು ಕಲಹಾಳದ ಬೀರಲಿಂಗೇಶ್ವರ ದೇವಸ್ಥಾನ, ಮುದಕವಿ ಹೋಬಳಿ ಮಟ್ಟದ ಸಭೆಯನ್ನು ಬಟಕುರ್ಕಿ ಗ್ರಾಮ ಪಂಚಾಯಿತಿ, ಕಟಕೋಳ ಹೋಬಳಿ ಮಟ್ಟದ ಸಭೆಯನ್ನು ತೋಟಗಟ್ಟಿ ಗ್ರಾಮದ ಚವಡಿಯಲ್ಲಿ ಮತ್ತು ಕೆ. ಚಂದರಗಿ ಹೋಬಳಿ ಮಟ್ಟದ ಸಭೆಯನ್ನು ಪಂಚಗಾವಿ ರಂಗ ಮಂದಿರದಲ್ಲಿ ಆಯೋಜಿಸಲಾಗಿದೆ. ತಾಲೂಕಿನ ಸಾರ್ವಜನಿಕರು ಪಿಂಚಣಿ ಯೋಜನೆಯ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳಬೇಕೆಂದು ಕೋರಲಾಗಿದೆ.

# ಸಾಧನೆಗೆ ಪರಿಶ್ರಮ ಅಗತ್ಯ

## ಕಾರ್ಯಾಗಾರದಲ್ಲಿ ಬಿಸ್ಕೋಪ ಕಿವಿಮಾತು

• **ಕನ್ನಡಪ್ರಭ ವಾರ್ತೆ** ಚಿಕ್ಕೋಡಿ

ಯಾವುದೇ ಒಬ್ಬ ವ್ಯಕ್ತಿಯ ಸಾಧನೆಯ ಹಿಂದೆ ಸತತ ಪರಿಶ್ರಮದ ಜೊತೆಗೆ ಪ್ರಯತ್ನ ಇರುತ್ತದೆ ಎಂದು ಸಿಎಲ್‌ಇ ಸಂಸ್ಥೆಯ ಆಡಳಿತಾಧಿಕಾರಿ ಎಸ್ .ಐ.ಬಿಸ್ಕೋಪ್ ಹೇಳಿದರು.

ಇಲ್ಲಿನ ಸಿ.ಎಲ್.ಇ ಸಂಸ್ಥೆಯ ಪದವಿ ಮಹಾವಿದ್ಯಾಲಯದಲ್ಲಿ ಹುಬ್ಬಳ್ಳಿಯ ದೇಶಪಾಂಡೆ ಫೌಂಡೇಶನ್ ಸಹಯೋಗದಲ್ಲಿ ವಿದ್ಯಾರ್ಥಿಗಳಿಗಾಗಿ ಶನಿವಾರ ಹಮ್ಮಿಕೊಂಡಿದ್ದ ಕಾರ್ಯಾಗಾರಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.

ವಿದ್ಯಾರ್ಥಿಗಳು ಅನಾವಶ್ಯಕ ಕಾಲಹರಣ ಮಾಡದೇ ಕಠಿಣ ಪರಿಶ್ರಮದಿಂದ ಅಧ್ಯಯನ ಮಾಡಿ ಹೊಸ ಹೊಸ ವಿಷಯಗಳ ಕುರಿತು ಜ್ಞಾನ ಹೊಂದುವ ಮೂಲಕ ಉಜ್ವಲ್ ಭವಿಷ್ಯ ರೂಪಿಸಲು ಮುಂದಾಗಬೇಕು ಎಂದರು.

ದೇಶಪಾಂಡೆ ಫೌಂಡೇಶನ್ ಹುಬ್ಬಳ್ಳಿ ಪ್ರೋಗ್ರಾಂ ಅಸೋಸಿ ಯೇಟರ್ ಪ್ರಮೋದ ಹುಕ್ಕೇರಿ ಮಾತ ನಾಡಿ, ವಿದ್ಯಾರ್ಥಿಗಳಲ್ಲಿ ನಾಯಕತ್ವ ಗುಣವನ್ನು ಬೆಳೆಸುವಲ್ಲಿ ದೇಶಪಾಂಡೆ ಫೌಂಡೇಶನ್ ಅವಿರತವಾಗಿ ಶ್ರಮಿಸುತ್ತಿದೆ ಎಂದು ಹೇಳಿದರು.

ಉಪನ್ಯಾಸಕರಾದ ಜಿ.ಬಿ. ಮೋಳಗಿ, ಎಂ.ಎಂ.ಬೋಜೆ ಮುಂತಾದವರು ಉಪಸ್ಥಿತರಿದ್ದರು. ಆರ್.ಬಿ.ನಾವಿ ಸ್ವಾಗತಿಸಿದರು. ಬಾಳಾಸಾಬ ಮಾಳಿ ನಿರೂಪಿಸಿದರು. ಪ್ರಾಚಾರ್ಯ ಎಸ್.ಎಸ್. ಮೆಟಗುಡ್ಡ ವಂದಿಸಿದರು.

# ಸ್ವಂತ ಖರ್ಚಿನಿಂದ ರುದ್ರಭೂಮಿ ಸ್ವಚ್ಛತೆ

• **ಕನ್ನಡಪ್ರಭ ವಾರ್ತೆ ಸವದತ್ತಿ**

ಮೃತರ ಅಂತ್ಯಸಂಸ್ಕಾರಕ್ಕೆ ರುದ್ರಭೂಮಿಯಲ್ಲಿ ಸಾರ್ವಜನಿಕರು ಅನುಭವಿಸುತ್ತಿದ್ದ ತೊಂದರೆ ಅರಿತು ಅಲ್ಲಿದ್ದ ಮುಳ್ಳುಕೊಂಪೆ, ಕಸ ಸ್ವಚ್ಛಗೊಳಿಸಿ ವಿದ್ಯುತ್ ಬಲ್ಬ್‌ಹಾಕಿ ಬೆಳಕಿನ ವ್ಯವಸ್ಥೆ ಮಾಡುವ ಮೂಲಕ ಸಾರ್ವಜನಿಕರು ಹಾಗೂ ನ್ಯೂ ಸ್ಟಾರ್ ಗ್ರುಪ್‌ನಿಂದ ಸ್ವಂತ ಹಣದಿಂದ ಜೆಸಿಬಿ ಮೂಲಕ ಸ್ವಚ್ಛತಾ ಕಾರ್ಯ ನಡೆಸಿದರು.

ಸುದ್ದಿ ತಿಳಿದು ಎಚ್ಚೆತ್ತ ಆರೋಗ್ಯಾಧಿಕಾರಿ ಪಿ.ಬಿ. ಮಠದ, ಅಭಿಯಂತರ ಕಾಮಣ್ಣವರ ಮತ್ತು ಸಿಬ್ಬಂದಿ ಸ್ಥಳಕ್ಕೆ ಭೇಟಿ ನೀಡಿ ಪುರಸಭೆ ಜೆಸಿಬಿಯನ್ನು ಸ್ವಚ್ಛತಾ ಕಾರ್ಯ ಮಾಡುವಲ್ಲಿ ತೊಡಗಿಸಿದರು.

ನ್ಯೂ ಸ್ಟಾರ್ ಗ್ರುಪ್ ಅಧ್ಯಕ್ಷ ಶಂಕರ ಇಜಂತಕರ ಮಾತನಾಡಿ, ಕಳೆದ ತಿಂಗಳು ಮಾಮನಿ ಕಲ್ಯಾಣ ಮಂಟಪದಲ್ಲಿ ಜರುಗಿದ ಜನಸಂಪರ್ಕ ಸಭೆಯಲ್ಲಿ ಪುರಸಭೆಗೆ ತಿಳಿಸಿದ ಕಾಮಗಾರಿಗಳನ್ನು ಈವರೆಗೆ ಕೈಗೆತ್ತಿಕೊಂಡಿಲ್ಲ. ಕಾಮಗಾರಿಗಳ ಮಾಹಿತಿ ಫಲಕ ಲಗತ್ತಿಸಿಲ್ಲ. ಜಾಕ್‌ವೆಲ್ ಹತ್ತಿರದ ಪೈಪಲೈನ್ ಸರಿಪಡಿಸಲು ಅಭಿಯಂತರ ಕಾಮಣ್ಣವರಿಗೆ ತಿಳಿಸಿದರೂ ಕ್ರಮ ಜರುಗಿಸಿಲ್ಲ ಎಂದು ದೂರಿದರು.

ಕುಡಿಯುವ ನೀರಿಗಾಗಿ ₹ 73 ಕೋಟಿ ಪ್ರಾಜೆಕ್ಟ್ ಇದೆ ಎಂದು ಹೇಳುತ್ತೀರಿ. ಅಧಿಕಾರಿಗಳು ಬಂದು ಹೇಳಿ ಹೋದರಾಯಿತು. ಎಲ್ಲವೂ ಅಲ್ಲಿಯೇ ನಿಂತು ಹೋಗುತ್ತದೆ. ಮತ್ತೆ ಸಾರ್ವಜನಿಕರು ತಕರಾರು ಮಾಡಿದಾಗಲೇ ಪುರಸಭೆಯವರು ಎಚ್ಚರಗೊಳ್ಳುತ್ತಾರೆಎಂದುಆಕ್ರೋಶಿಸಿದರು. ಪುರಸಭೆ ಮುಖ್ಯಾಧಿಕಾರಿ ಕೆ.ಐ. ನಾಗನೂರ ಮಾತನಾಡಿ, ಕೆಲ ಕ್ರಿಯಾ ಯೋಜನೆಗಳು ಸರ್ಕಾರಿ ಮಟ್ಟದಲ್ಲಿ ಚರ್ಚೆ ಆಗುತ್ತಿವೆ. ಕುಡಿಯುವ ನೀರು ಸೇರಿದಂತೆ ಎಲ್ಲ ಸಾರ್ವಜನಿಕರ ಕಾರ್ಯ ಮಾಡಲಾಗುವುದು ಎಂದರು.

## ಕಜಾಪಕ್ಕೆ ಚಂದ್ರಶೇಖರ ನೇಮಕ

**ಬೆಳಗಾವಿ:** ಕನ್ನಡ ಜಾನಪದ ಪರಿಷತ್ತಿನ ಬೈಲಹೊಂಗಲ ತಾಲೂಕಾ ಘಟಕದ ಅಧ್ಯಕ್ಷರಾಗಿ ಚಂದ್ರಶೇಖರ ರುದ್ರಪ್ಪ ಕೊಪ್ಪದ ನೇಮಕಗೊಂಡಿದ್ದಾರೆ. ಕೊಪ್ಪದ ಅವರು ತಾಲೂಕಿನಲ್ಲಿ ಸಾಹಿತ್ಯ ಚಟುವಟಿಕೆಗಳಲ್ಲಿ ನಿರಂತರವಾಗಿ ತೊಡಗಿಸಿಕೊಂಡಿದ್ದಾರೆ.

## ಫಲಾನುಭವಿಗಳ ಆಯ್ಕೆಗೆ ಅಸಮಾಧಾನ

**ರಾಮದುರ್ಗ:** ಪ್ರಧಾನ ಮಂತ್ರಿ ಆವಾಸ ಯೋಜನೆ ಅಡಿ ಅರ್ಹ ಫಲಾನುಭವಿಗಳನ್ನು ಆಯ್ಕೆ ಮಾಡಿಲ್ಲ ಎಂದು ತಾಲೂಕಿನ ಅವರಾದಿ ಗ್ರಾಪಂ ಸದಸ್ಯರು ಮತ್ತು ಗ್ರಾಮಸ್ಥರು ಪಿಡಿಒ, ಗ್ರಾಪಂ ಅಧ್ಯಕ್ಷರ ವಿರುದ್ಧ ಹರಿಹಾಯ್ದರು. ಸದಸ್ಯ ಸ್ಥಾನಕ್ಕೆ ಸಾಮೂಹಿಕ ರಾಜಿನಾಮೆ ನೀಡುತ್ತೇವೆ ಎಂದು ಮಹಾದೇವಿ ಗುರುಬಸಣ್ಣವರ ಇತರರು ಎಚ್ಚರಿಸಿದ್ದಾರೆ.


**ಶ್ರೀ ರೇಣುಕಾ ಶುಗರ್ಸ್ ಲಿಮಿಟೆಡ್**
SHREE RENUKA SUGARS
ರಿಜಿಸ್ಟರ್ಡ್ ಆಫೀಸ್ : ಬಿಸಿ 105, ಹ್ಯಾವೆಲಾಕ್ ರಸ್ತೆ, ಕ್ಯಾಂಪು, ಬೆಳಗಾವಿ – 590001.
ವೆಬ್‌ಸೈಟ್ : www.renukasugars.com; ಇಮೇಲ್ : einward.ris@karvy.com
ಫೋನ್ ನಂ. : +918312404000; ಫ್ಯಾಕ್ಸ್ ನಂ. : +918312469891;
CIN: L01542KA1995PLC019046

**ಸೂಚನೆ**

ಈ ಮೂಲಕ ಕೆಳಗಿನಂತೆ ಸೂಚನೆ ನೀಡಲಾಗುತ್ತಿದೆ :

1. ಆಗಸ್ಟ್ 22, 2016ರ ದಿನಾಂಕಿತ ಎಜಿಎಂ ಸೂಚನೆಯಲ್ಲಿ (ಎಜಿಎಂ ಸೂಚನೆ) ನಿಗದಿಪಡಿಸಿದಂತೆ ವ್ಯವಹಾರಗಳನ್ನು ನಡೆಸಲು, ಮಂಗಳವಾರ, ಸೆಪ್ಟೆಂಬರ್ 27, 2016ರ ಬೆಳಗ್ಗೆ 11.00ಕ್ಕೆ ಮರಾಠಾ ಮಂದಿರ ಹಾಲ್, ರೈಲ್ವೆ ಓವರ್ ಬ್ರಿಡ್ಜ್ ಬಳಿ, ಖಾನಾಪುರ ರಸ್ತೆ, ಬೆಳಗಾವಿ–590006 ಈ ವಿಳಾಸದಲ್ಲಿ ಕಂಪನಿಯ 20ನೆಯ ವಾರ್ಷಿಕ ಸಾಮಾನ್ಯ ಸಭೆಯನ್ನು (ಎಜಿಎಂ) ನಡೆಸಲಾಗುತ್ತದೆ.
2. ಸೆಬಿ (ಲಿಸ್ಟಿಂಗ್ ಆಬ್ಲಿಗೇಶನ್ಸ್ ಅಂಡ್ ಡಿಸ್‌ಕ್ಲೋಶರ್ ರಿಕ್ವೈರ್‌ಮೆಂಟ್ಸ್ ) ರೆಗ್ಯುಲೇಶನ್ಸ್ , 2015 ಕ್ಕೆ (ಲಿಸ್ಟಿಂಗ್ ರೆಗ್ಯುಲೇಶನ್ಸ್ ) ಅನ್ವಯಿಸುವ, ಯಾವುದೇ ಇದ್ದರೂ, ಮುನ್ನೇರ್ಪಾಡುಗಳ ಹಾಗೂ ಕಂಪನಿ ಕಾಯಿದೆ, 2013 ಸೆಕ್ಷನ್ 91ರ ಮತ್ತು ತದನಂತರದ ನಿಯಮಾವಳಿಗಳ ಅನ್ವಯ ಸದಸ್ಯರ ರಿಜಿಸ್ಟರ್ ಮತ್ತು ಶೇರು ವರ್ಗಾವಣೆಯ ಪುಸ್ತಕವನ್ನು ಮಂಗಳವಾರ, ಸೆಪ್ಟೆಂಬರ್ 20, 2016 ರಿಂದ ಮಂಗಳವಾರ, ಸೆಪ್ಟೆಂಬರ್ 27, 2016 ರ ವರೆಗೆ ( ಈ ಎರಡೂ ದಿನಗಳು ಸೇರಿದಂತೆ) ಸ್ಥಗಿತಗೊಳಿಸಲಾಗುವುದು.
3. ಆಗಸ್ಟ್ 19, 2016 ರಂದು ವ್ಯವಹಾರದ ಗಂಟೆಗಳು ಮುಗಿಯುತ್ತಿದ್ದಂತೆ ನ್ಯಾಷನಲ್ ಸೆಕ್ಯುರಿಟೀಸ್ ಡಿಪಾಸಿಟರಿ ಲಿಮಿಟೆಡ್ (ಎನ್‌ಎಸ್‌ಡಿಎಲ್) ಮತ್ತು ಸೆಂಟ್ರಲ್ ಡಿಪಾಸಿಟರಿ ಸರ್ವಿಸಸ್ (ಇಂಡಿಯಾ) ಲಿಮಿಟೆಡ್ (ಸಿಡಿಎಸ್‌ಎಲ್) ಅಥವಾ ಕಂಪನಿಯ ಸದಸ್ಯರುಗಳ ರಿಜಿಸ್ಟರ್‌ನಲ್ಲಿ ನಿರ್ವಹಿಸಿದಂತೆ ಫಲಾನುಭವಿ ಮಾಲೀಕರ ಪಟ್ಟಿಯಲ್ಲಿ ಕಂಡುಬರುವ ಹೆಸರುಗಳ ಶೇರುದಾರರಿಗೆ 2015–16ರ ಆರ್ಥಿಕ ವರ್ಷದ ವಾರ್ಷಿಕ ವರದಿ ಮತ್ತು ಎಜಿಎಂನ ಸೂಚನೆಗಳ ಕಳಿಸುವಿಕೆಯನ್ನು ಕಂಪನಿಯು ಸೆಪ್ಟೆಂಬರ್ 3, 2016 ರಂದು ಪೂರ್ಣಗೊಳಿಸಿದೆ. ಎನ್‌ಎಸ್‌ಡಿಎಲ್ / ಸಿಡಿಎಸ್‌ಎಲ್ / ಕಂಪನಿಯಲ್ಲಿ ಇ–ಮೇಲ್ ನೋಂದಾಯಿಸಿದ ಸದಸ್ಯರುಗಳಿಗೆ ಇ–ಮೇಲ್ ಮೂಲಕ ಹಾಗೂ ಇ–ಮೇಲ್ ವಿಳಾಸ ನೋಂದಾಯಿಸಿರದ ಸದಸ್ಯರುಗಳಿಗೆ ವಾಸ್ತವದ ವಿಧಾನದ ಮೂಲಕ ಎಜಿಎಂನ ಸೂಚನೆ ಮತ್ತು 2015–16ರ ವಾರ್ಷಿಕ ವರದಿಗಳನ್ನು ಕಳಿಸಲಾಗಿದೆ.
4. ಸೆಪ್ಟೆಂಬರ್ 20, 2016ರಲ್ಲಿಯಂತೆ ಅಂದರೆ ಕಡಿತದ ದಿನಾಂಕದಂದು ವಾಸ್ತವದ ರೂಪದಲ್ಲಿ ಅಥವಾ ಡಿಮೆಟೀರಿಯಲೈಸ್ಡ್ ರೂಪದಲ್ಲಿ ಶೇರುಗಳನ್ನು ಹೊಂದಿರುವವರು, ಎಜಿಎಂನ ಸ್ಥಳ ಹೊರತುಪಡಿಸಿ ಬೇರೆ ಸ್ಥಳದಿಂದ ಕಾರ್ವಿ ಕಂಪ್ಯೂಟರ್‌ಶೇರ್ ಪ್ರೈವೇಟ್ ಲಿಮಿಟೆಡ್ (ಕಾರ್ವಿ) ಅವರ ಎಲೆಕ್ಟ್ರಾನಿಕ್ ಮತದಾನ ವ್ಯವಸ್ಥೆಯ ಮೂಲಕ ಎಜಿಎಂನ ಸೂಚನೆಯಲ್ಲಿ ನಿಗದಿಪಡಿಸಿದ ವ್ಯವಹಾರಗಳ ಕುರಿತಂತೆ ಎಲೆಕ್ಟ್ರಾನಿಕ್ ವಿಧಾನದ ಮೂಲಕ ತಮ್ಮ ಮತಗಳನ್ನು ಚಲಾಯಿಸಬಹುದು.
   i. ಎಲೆಕ್ಟ್ರಾನಿಕ್ ವಿಧಾನದ ಮೂಲಕ ಎಜಿಎಂನ ಸೂಚನೆಯಲ್ಲಿ ನಿಗದಿಪಡಿಸಿದ ವ್ಯವಹಾರ ನಿರ್ವಹಿಸಬಹುದು :
   ii. ರಿಮೋಟ್ ಇ–ಮತದಾನವು ಸೆಪ್ಟೆಂಬರ್ 23, 2016 ರಂದು ಬೆಳಗ್ಗೆ 9.00 ಕ್ಕೆ ಆರಂಭವಾಗತಕ್ಕದ್ದು.
   iii. ರಿಮೋಟ್ ಇ–ಮತದಾನವು ಸೆಪ್ಟೆಂಬರ್ 26, 2016 ರಂದು ಸಂಜೆ 5.00 ಕ್ಕೆ ಮುಗಿಯತಕ್ಕದ್ದು.
   iv. ಎಲೆಕ್ಟ್ರಾನಿಕ್ ವಿಧಾನದ ಮೂಲಕ ಅಥವಾ ಎಜಿಎಂನಲ್ಲಿ ಮತಚಲಾಯಿಸಲು ಅರ್ಹತೆಗೆ ಕಡಿತದ ದಿನಾಂಕವು ಸೆಪ್ಟೆಂಬರ್ 20, 2016 ಆಗಿರುತ್ತದೆ ;
   v. ಎಜಿಎಂನ ಸೂಚನೆ ಕಳಿಸಿದ ನಂತರ ಕಂಪನಿಯ ಶೇರುಗಳನ್ನು ಪಡೆದುಕೊಳ್ಳುವ ಮತ್ತು ಸದಸ್ಯರಾಗುವ ಹಾಗೂ ಸೆಪ್ಟೆಂಬರ್ 20, 2016 ರಲ್ಲಿಯಂತೆ ಅಂದರೆ ಕಡಿತದ ದಿನಾಂಕದಂದು ಶೇರುಗಳನ್ನು ಹೊಂದಿದ್ದ ಯಾವುದೇ ವ್ಯಕ್ತಿಯು ಎಜಿಎಂನ ಸೂಚನೆ ಹಾಗೂ ಇ–ಮತದಾನದ ಪ್ರಕ್ರಿಯೆ ಪಡೆದುಕೊಳ್ಳಲು evoting@karvy.com ಗೆ ಇಮೇಲ್ ಮಾಡಬಹುದು ಅಥವಾ ಕಾರ್ವಿಯ ದರರಹಿತದ ನಂಬರ್ 1800–3454–001 ಗೆ ಕರೆಮಾಡಬಹುದು ಅಥವಾ ಕಾರ್ವಿ ಕಂಪ್ಯೂಟರ್‌ಶೇರ್ ಪ್ರೈ.ಲಿ., ಯೂನಿಟ್ : ಶ್ರೀ ರೇಣುಕಾ ಶುಗರ್ಸ್ ಲಿಮಿಟೆಡ್, ಕಾರ್ವಿ ಸೆಲೆನಿಯಂ ಟವರ್ ಬಿ, ಪ್ಲಾಟ್ 31–32, ಗಾಚಿಬೌಲಿ, ಫೈನಾನ್ಷಿಯಲ್ ಡಿಸ್ಟ್ರಿಕ್ಟ್, ನಾನಕ್‌ರಾಂಗುಡ, ಹೈದರಾಬಾದ್ – 500 032 ಇಲ್ಲಿಗೆ ಬರೆಯಬಹುದು.
   vi. ಸದಸ್ಯರು ದಯಮಾಡಿ ಈ ಅಂಶಗಳನ್ನೂ ಗಮನಿಸಿ : (ಎ) ಮೇಲೆ ಹೇಳಿದ ದಿನಾಂಕದಂದು ಹಾಗೂ ಇ–ಮತದಾನದ ಸಮಯದ ನಂತರ ಮತ್ತು ಸದಸ್ಯರೊಬ್ಬರು ಮತದಾನ ಮಾಡಿದ ನಂತರ ಕಾರ್ವಿ ಅವರು ರಿಮೋಟ್ ಇ–ಮತದಾನದ ವಿಧಾನವನ್ನು ಸ್ಥಗಿತಗೊಳಿಸುವರಲ್ಲದೆ, ತದನಂತರ ಸದಸ್ಯರಿಗೆ ಬದಲಾವಣೆಗೆ ಅವಕಾಶವಿರುವುದಿಲ್ಲ ; (ಬಿ) ಮತ ಪತ್ರದ ಮೂಲಕ ಮತದಾನ ನೀಡುವ ಸೌಲಭ್ಯವನ್ನು ಎಜಿಎಂನಲ್ಲಿ ಕಲ್ಪಿಸಲಾಗುವುದು ; ಮತ್ತು (ಸಿ) ಎಜಿಎಂಗೆ ಮುನ್ನ ರಿಮೋಟ್ ಇ–ಮತದಾನದ ಮೂಲಕ ಮತ ಚಲಾಯಿಸಿದ ಸದಸ್ಯರು ಎಜಿಎಂನಲ್ಲಿ ಭಾಗವಹಿಸ ಬಹುದಾದರೂ ಮತ್ತೊಮ್ಮೆ ಮತ ಚಲಾಯಿಸಲು ಅರ್ಹರಾಗಿರುವುದಿಲ್ಲ; ಮತ್ತು (ಡಿ) ರಿಮೋಟ್ ಇ–ಮತದಾನದ ಮೂಲಕ ಮತ್ತು ಮತ ಪತ್ರದ ಮೂಲಕ ಎಜಿಎಂನಲ್ಲಿ ಮತ ಚಲಾಯಿಸಲು ಕಡಿತದ ದಿನಾಂಕದಂದು ಡಿಪಾಸಿಟರೀಸ್‌ಗಳು ನಿರ್ವಹಿಸುವ ಫಲಾನುಭವಿಗಳ ರಿಜಿಸ್ಟರ್‌ನಲ್ಲಿ ಅಥವಾ ಸದಸ್ಯರುಗಳ ರಿಜಿಸ್ಟರ್‌ನಲ್ಲಿ ದಾಖಲಾಗಿರುವ ವ್ಯಕ್ತಿಗಳು ಮಾತ್ರವೇ ಅರ್ಹರಾಗಿರುತ್ತಾರೆ ;
   vii. ಎಜಿಎಂನ ಸೂಚನೆಯು ಕಂಪನಿಯ ವೆಬ್‌ಸೈಟ್ www.renukasugars.com ಮತ್ತು ಕಾರ್ವಿಯ ವೆಬ್‌ಸೈಟ್ www.evoting.karvy.com ಗಳಲ್ಲಿ ಲಭ್ಯವಿದೆ, ಮತ್ತು
   viii. ಯಾವುದೇ ವಿಚಾರಣೆಗಳು ಇದ್ದಲ್ಲಿ ಸದಸ್ಯರು https://evoting.karvy.com ನಲ್ಲಿನ ಡೌನ್‌ಲೋಡ್ ಸೆಕ್ಷನ್‌ನಲ್ಲಿ ಲಭ್ಯವಿರುವ ಶೇರುಹೋಲ್ಡರ್‌ಗಳಿಗಾಗಿ ಫ್ರೀಕ್ವಂಟ್ಲಿ ಆಸ್ಕ್ಡ್ ಕ್ವೆಶ್ಚನ್ಸ್ (ಎಫ್‌ಎಕ್ಯೂಗಳು) ಪರಿಶೀಲಿಸಬಹುದು ಅಥವಾ ಶ್ರೀ ಆನಂದನ್ ಕೆ., ಮ್ಯಾನೇಜರ್ ಆಫ್ ಕಾರ್ವಿ ಅವರನ್ನು 040–6716 1591 ನಲ್ಲಿ ಸಂಪರ್ಕಿಸಬಹುದು ಅಥವಾ evoting.karvy.com ನಲ್ಲಿ ಇ–ಮೇಲ್ ಮಾಡಬಹುದು ಅಥವಾ 1800 345 4001 (ದರರಹಿತ) ಸಂಪರ್ಕಿಸಬಹುದು.

ಶ್ರೀ ರೇಣುಕಾ ಶುಗರ್ಸ್ ಲಿಮಿಟೆಡ್ ಪರವಾಗಿ
ನವೀನ್ ಮಂಘಾನಿ
ಕಂಪನಿ ಕಾರ್ಯದರ್ಶಿ

ಸ್ಥಳ : ಮುಂಬಯಿ
ದಿನಾಂಕ : ಸೆಪ್ಟೆಂಬರ್ 5, 2016



ಕರ್ನಾಟಕ ಸರ್ಕಾರ
**ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ**
**ಕಾರ್ಯಪಾಲಕ ಅಭಿಯಂತರರವರ ಕಛೇರಿ, ದಾವಣಗೆರೆ ವಿಭಾಗ, ದಾವಣಗೆರೆ.**
ಪ್ರಕಟಣೆ ಸಂ: ಐಎಫ್‌ಟಿ–09/ಎಇ–1/2016–17/1337 ದಿನಾಂಕ:– 01.09.2016

**ಇ– ಪ್ರೊಕೂರ್‌ಮೆಂಟ್ ಟೆಂಡರ್ ಪ್ರಕಟಣೆ**

ಕರ್ನಾಟಕ ರಾಜ್ಯಪಾಲರ ಪರವಾಗಿ ಕಾರ್ಯಪಾಲಕ ಅಭಿಯಂತರು, ಲೋಕೋಪಯೋಗಿ ವಿಭಾಗ, ದಾವಣಗೆರೆರವರಿಂದ ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆಯಲ್ಲಿ ನೋಂದಾಯಿತ, ಅರ್ಹ ಗುತ್ತಿಗೆದಾರರಿಂದ ಈ ಕೆಳಕಂಡ ಕಾಮಗಾರಿಗೆ ಇ– ಪ್ರೊಕೂರ್‌ಮೆಂಟ್ ಪೋರ್ಟಲ್ ಮೂಲಕ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ.

| ಕ್ರ. ಸಂ. | ಕಾಮಗಾರಿಯ ಹೆಸರು | ಟೆಂಡರ್‌ಗಿಟ್ಟ ಮೊತ್ತ (ರೂ. ಲಕ್ಷಗಳಲ್ಲಿ) |
|---|---|---|
| | ಲೆಕ್ಕಶೀರ್ಷಿಕೆ : 5054–04–337–0–01–422 -SCP-District & Other Roads | |
| 1 | ದಾವಣಗೆರೆ ತಾಲ್ಲೂಕ್ ಹದಡಿ ಗ್ರಾಮದ ಎಸ್.ಸಿ. ಕಾಲೋನಿಯಲ್ಲಿ ಒಳಚರಂಡಿ ನಿರ್ಮಾಣ. | 75.00 |
| 2 | ದಾವಣಗೆರೆ ತಾ. ಮುದಹದಡಿ ಗ್ರಾಮದ ಎಸ್.ಸಿ. ಕಾಲೋನಿಯಲ್ಲಿ ಕಾಂಕ್ರೀಟ್ ರಸ್ತೆ ಮತ್ತು ಚರಂಡಿ ನಿರ್ಮಾಣ. | 10.00 |
| 3 | ದಾವಣಗೆರೆ ತಾಲ್ಲೂಕ್ ಮುದಹದಡಿ ಗ್ರಾಮದ ದುರ್ಗಾಂಬಿಕಾ ಬಡಾವಣೆಯ ಎಸ್.ಸಿ. ಕಾಲೋನಿಯಲ್ಲಿ ಕಾಂಕ್ರೀಟ್ ರಸ್ತೆ ನಿರ್ಮಾಣ. | 10.00 |
| 4 | ದಾವಣಗೆರೆ ತಾಲ್ಲೂಕ್ ಬಿಸಲೇರಿ ಗ್ರಾಮದ ಮಹಾದೇವಿಪುರ ಕ್ಯಾಂಪ್ ಎಸ್.ಸಿ. ಕಾಲೋನಿಯಲ್ಲಿ ಕಾಂಕ್ರೀಟ್ ರಸ್ತೆ ನಿರ್ಮಾಣ. | 5.00 |
| 5 | ದಾವಣಗೆರೆ ತಾಲ್ಲೂಕ್ ಜರೀಕಟ್ಟೆ ಗ್ರಾಮದ ಎಸ್.ಸಿ. ಕಾಲೋನಿಯಲ್ಲಿ ಕಾಂಕ್ರೀಟ್ ರಸ್ತೆ ನಿರ್ಮಾಣ. | 5.00 |
| 6 | ದಾವಣಗೆರೆ ತಾಲ್ಲೂಕ್ ಕೋಳೆನಹಳ್ಳಿ ಗ್ರಾಮದ ಎಸ್.ಸಿ. ಕಾಲೋನಿಯಲ್ಲಿ ಕಾಂಕ್ರೀಟ್ ರಸ್ತೆ ನಿರ್ಮಾಣ. | 10.00 |
| 7 | ದಾವಣಗೆರೆ ತಾಲ್ಲೂಕ್ ಶಿರಮಗೊಂಡನಹಳ್ಳಿ ಗ್ರಾಮದ ಎಸ್.ಸಿ. ಕಾಲೋನಿಯಲ್ಲಿ ಕಾಂಕ್ರೀಟ್ ರಸ್ತೆ ನಿರ್ಮಾಣ. | 15.00 |
| 8 | ದಾವಣಗೆರೆ ತಾಲ್ಲೂಕ್ ಕೈದಾಳ್ ಗ್ರಾಮದ ಎಸ್.ಸಿ. ಕಾಲೋನಿಯಲ್ಲಿ ಕಾಂಕ್ರೀಟ್ ರಸ್ತೆ ನಿರ್ಮಾಣ. | 16.08 |
| 9 | ದಾವಣಗೆರೆ ತಾಲ್ಲೂಕ್ ಕೊಲುಕುಂಟೆ ಗ್ರಾಮದ ಎಸ್.ಸಿ. ಕಾಲೋನಿಯಲ್ಲಿ ಕಾಂಕ್ರೀಟ್ ರಸ್ತೆ ನಿರ್ಮಾಣ. | 16.09 |
| 10 | ದಾವಣಗೆರೆ ತಾಲ್ಲೂಕ್ ಚಂದ್ರನಹಳ್ಳಿ ಗ್ರಾಮದ ಎಸ್.ಸಿ. ಕಾಲೋನಿಯಲ್ಲಿ ಕಾಂಕ್ರೀಟ್ ರಸ್ತೆ ನಿರ್ಮಾಣ. | 10.00 |
| 11 | ದಾವಣಗೆರೆ ತಾಲ್ಲೂಕ್ ಗಿರಿಯಾಪುರ ಗ್ರಾಮದ ಎಸ್.ಸಿ. ಕಾಲೋನಿಯಲ್ಲಿ ಕಾಂಕ್ರೀಟ್ ರಸ್ತೆ ನಿರ್ಮಾಣ. | 5.02 |
| 12 | ದಾವಣಗೆರೆ ತಾಲ್ಲೂಕ್ ದೊಡ್ಡಬಾತಿ ಗ್ರಾಮದ ಎಸ್.ಸಿ. ಕಾಲೋನಿಯಲ್ಲಿ ಒಳಚರಂಡಿ ನಿರ್ಮಾಣ | 50.00 |
| 13 | ದಾವಣಗೆರೆ ತಾಲ್ಲೂಕ್ ಕಕ್ಕರಗೊಳ್ಳ ಗ್ರಾಮದ ಎಸ್.ಸಿ. ಕಾಲೋನಿಯಲ್ಲಿ ಒಳಚರಂಡಿ ನಿರ್ಮಾಣ. | 75.00 |
| 14 | ದಾವಣಗೆರೆ ತಾಲ್ಲೂಕ್ ಹಳೇಬಾತಿ ಗುಡ್ಡದ ಕ್ಯಾಂಪ್ ಎಸ್.ಸಿ. ಕಾಲೋನಿಯಲ್ಲಿ ಕಾಂಕ್ರೀಟ್ ರಸ್ತೆ ಮತ್ತು ಬಾಕ್ಸ್ ಚರಂಡಿ ನಿರ್ಮಾಣ | 20.00 |
| 15 | ದಾವಣಗೆರೆ ತಾಲ್ಲೂಕ್ ಕಾಡಜ್ಜಿ ಗ್ರಾಮದ ಎಸ್‌ಸಿ. ಕಾಲೋನಿಯಲ್ಲಿ ಕಾಂಕ್ರೀಟ್ ರಸ್ತೆ ನಿರ್ಮಾಣ. | 35.00 |
| 16 | ದಾವಣಗೆರೆ ತಾಲ್ಲೂಕ್ ಬೇತೂರು ಗ್ರಾಮದ ಎಸ್‌ಸಿ. ಕಾಲೋನಿಯಲ್ಲಿ ಕಾಂಕ್ರೀಟ್ ರಸ್ತೆ ಮತ್ತು ಚರಂಡಿ ನಿರ್ಮಾಣ | 10.00 |
| 17 | ದಾವಣಗೆರೆ ತಾಲ್ಲೂಕು ದೊಡ್ಡಓಬಜ್ಜಿಹಳ್ಳಿ ಗ್ರಾಮದ ಪ್ರಾಥಮಿಕ ಶಾಲೆಯಿಂದ ಕಡ್ಲೇಬಾಳು ತಳವಾರ ಹಟ್ಟಿಯವರೆಗೆ ಎಸ್.ಸಿ ಕಾಲೋನಿ ಮುಖಾಂತರ ಕಾಂಕ್ರೀಟ್ ರಸ್ತೆ ಮತ್ತು ತಡೆಗೋಡೆ ನಿರ್ಮಾಣ | 25.27 |
| 18 | ದಾವಣಗೆರೆ ತಾಲ್ಲೂಕು ತೋಳಹುಣಸೆ ಗ್ರಾಮದ ಎಸ್.ಸಿ ಕಾಲೋನಿಯಲ್ಲಿ ಕಾಂಕ್ರೀಟ್ ರಸ್ತೆ ನಿರ್ಮಾಣ | 10.00 |
| 19 | ದಾವಣಗೆರೆ ತಾಲ್ಲೂಕು ಹೆಬ್ಬಾಳು ಗ್ರಾಮದ ಎಸ್.ಸಿ ಕಾಲೋನಿಯಲ್ಲಿ ಕಾಂಕ್ರೀಟ್ ರಸ್ತೆ ನಿರ್ಮಾಣ | 8.00 |
| 20 | ದಾವಣಗೆರೆ ತಾಲ್ಲೂಕು ಗೊಲ್ಲರಹಳ್ಳಿ ಗ್ರಾಮದ ಎಸ್.ಸಿ ಕಾಲೋನಿಯಲ್ಲಿ ಕಾಂಕ್ರೀಟ್ ರಸ್ತೆ ನಿರ್ಮಾಣ | 14.00 |
| 21 | ದಾವಣಗೆರೆ ತಾಲ್ಲೂಕು ಹುಚ್ಚವ್ವನಹಳ್ಳಿ ಗ್ರಾಮದ ಎಸ್.ಸಿ ಕಾಲೋನಿಯಲ್ಲಿ ಕಾಂಕ್ರೀಟ್ ರಸ್ತೆ ನಿರ್ಮಾಣ | 7.50 |
| 22 | ದಾವಣಗೆರೆ ತಾಲ್ಲೂಕು ಆಗಸನಕಟ್ಟೆ ಗ್ರಾಮದ ಎಸ್.ಸಿ ಕಾಲೋನಿಯಲ್ಲಿ ಕಾಂಕ್ರೀಟ್ ರಸ್ತೆ ನಿರ್ಮಾಣ | 8.00 |
| 23 | ದಾವಣಗೆರೆ ತಾಲ್ಲೂಕು ಮಲ್ಲಶೆಟ್ಟಿಹಳ್ಳಿ ಗ್ರಾಮದ ಎಸ್.ಸಿ ಕಾಲೋನಿಯಲ್ಲಿ ಕಾಂಕ್ರೀಟ್ ರಸ್ತೆ ನಿರ್ಮಾಣ | 5.00 |
| | ಲೆಕ್ಕಶೀರ್ಷಿಕೆ : 5054–04–337–0–01–423 -TSP District & Other Roads | |
| 24 | ದಾವಣಗೆರೆ ತಾಲ್ಲೂಕ್ ಹದಡಿ ಗ್ರಾಮದ ಎಸ್.ಟಿ. ಕಾಲೋನಿಯಲ್ಲಿ ಒಳಚರಂಡಿ ನಿರ್ಮಾಣ. | 49.06 |
| 25 | ದಾವಣಗೆರೆ ತಾಲ್ಲೂಕ್ ಕನಗೊಂಡನಹಳ್ಳಿ ಗ್ರಾಮದ ಎಸ್.ಟಿ. ಕಾಲೋನಿಯಲ್ಲಿ ಕಾಂಕ್ರೀಟ್ ರಸ್ತೆ ನಿರ್ಮಾಣ. | 30.00 |
| 26 | ದಾವಣಗೆರೆ ತಾ. ಬಲ್ಲೂರು ಹೊಸಬಡಾವಣೆ ಗ್ರಾಮದ ಎಸ್.ಟಿ. ಕಾಲೋನಿಯಲ್ಲಿ ಕಾಂಕ್ರೀಟ್ ರಸ್ತೆ ನಿರ್ಮಾಣ. | 15.00 |
| 27 | ದಾವಣಗೆರೆ ತಾಲ್ಲೂಕ್ ತುರ್ಚಘಟ್ಟ ಗ್ರಾಮದ ಎಸ್.ಟಿ. ಕಾಲೋನಿಯಲ್ಲಿ ಕಾಂಕ್ರೀಟ್ ರಸ್ತೆ ನಿರ್ಮಾಣ. | 10.00 |
| 28 | ದಾವಣಗೆರೆ ತಾಲ್ಲೂಕ್ ಬಲ್ಲೂರು ಗ್ರಾಮದ ಎಸ್.ಟಿ. ಕಾಲೋನಿಯಲ್ಲಿ ಕಾಂಕ್ರೀಟ್ ರಸ್ತೆ ನಿರ್ಮಾಣ. | 20.00 |
| 29 | ದಾವಣಗೆರೆ ತಾಲ್ಲೂಕ್ ಹೊಸ ಬೆಳವನೂರು ಗ್ರಾಮದ ಎಸ್.ಟಿ. ಕಾಲೋನಿಯಲ್ಲಿ ಕಾಂಕ್ರೀಟ್ ರಸ್ತೆ ನಿರ್ಮಾಣ. | 15.00 |
| 30 | ದಾವಣಗೆರೆ ತಾಲ್ಲೂಕ್ ದೊಡ್ಡಬಾತಿ ಗ್ರಾಮದ ಎಸ್.ಟಿ. ಕಾಲೋನಿಯಲ್ಲಿ ಒಳಚರಂಡಿ ನಿರ್ಮಾಣ. | 50.00 |
| 31 | ದಾವಣಗೆರೆ ತಾ.ಮಾಳಗೊಂಡನಹಳ್ಳಿ ಗ್ರಾಮದ ಎಸ್.ಟಿ. ಕಾಲೋನಿಯಲ್ಲಿ ಕಾಂಕ್ರೀಟ್ ರಸ್ತೆ ಮತ್ತು ಚರಂಡಿ ನಿರ್ಮಾಣ. | 25.00 |
| 32 | ದಾವಣಗೆರೆ ತಾ. ಬಿ.ಚಿತ್ತಾನಹಳ್ಳಿ ಗ್ರಾಮದ ಎಸ್.ಟಿ. ಕಾಲೋನಿಯಲ್ಲಿ ಕಾಂಕ್ರೀಟ್ ರಸ್ತೆ ಮತ್ತು ಚರಂಡಿ ನಿರ್ಮಾಣ. | 30.00 |
| 33 | ದಾವಣಗೆರೆ ತಾ. ಹೊಸಕಡ್ಲೇಬಾಳು ಗ್ರಾಮದ ಎಸ್.ಟಿ. ಕಾಲೋನಿಯಲ್ಲಿ ಕಾಂಕ್ರೀಟ್ ರಸ್ತೆ ಮತ್ತು ಚರಂಡಿ ನಿರ್ಮಾಣ. | 20.00 |
| 34 | ದಾವಣಗೆರೆ ತಾ. ಅಮೃತನಗರ ಗ್ರಾಮದ ಎಸ್.ಟಿ. ಕಾಲೋನಿಯಲ್ಲಿ ಕಾಂಕ್ರೀಟ್ ರಸ್ತೆ ಮತ್ತು ಚರಂಡಿ ನಿರ್ಮಾಣ. | 25.00 |
| 35 | ದಾವಣಗೆರೆ ತಾಲ್ಲೂಕ್ ಬೇತೂರು ಗ್ರಾಮದ ಎಸ್.ಟಿ. ಕಾಲೋನಿಯಲ್ಲಿ ಕಾಂಕ್ರೀಟ್ ರಸ್ತೆ ಮತ್ತು ಚರಂಡಿ ನಿರ್ಮಾಣ. | 10.00 |
| 36 | ದಾವಣಗೆರೆ ತಾ. ಹಳೆಕಡ್ಲೇಬಾಳು ಗ್ರಾಮದ ಎಸ್.ಟಿ. ಕಾಲೋನಿಯಲ್ಲಿ ಕಾಂಕ್ರೀಟ್ ರಸ್ತೆ ಮತ್ತು ಚರಂಡಿ ನಿರ್ಮಾಣ. | 8.00 |
| 37 | ದಾವಣಗೆರೆ ತಾಲ್ಲೂಕ್ ನೀಲನಹಳ್ಳಿ ಗ್ರಾಮದ ಎಸ್.ಟಿ. ಕಾಲೋನಿಯಲ್ಲಿ ಕಾಂಕ್ರೀಟ್ ರಸ್ತೆ ನಿರ್ಮಾಣ. | 21.60 |
| 38 | ದಾವಣಗೆರೆ ತಾಲ್ಲೂಕ್ ಚಿಕ್ಕತೊಗಲೇರಿ ಗ್ರಾಮದ ಎಸ್.ಟಿ. ಕಾಲೋನಿಯಲ್ಲಿ ಕಾಂಕ್ರೀಟ್ ರಸ್ತೆ ನಿರ್ಮಾಣ. | 10.00 |
| 39 | ದಾವಣಗೆರೆ ತಾಲ್ಲೂಕ್ ಯರವನಾಗ್ತಿಹಳ್ಳಿ ಗ್ರಾಮದ ಎಸ್.ಟಿ. ಕಾಲೋನಿಯಲ್ಲಿ ಕಾಂಕ್ರೀಟ್ ರಸ್ತೆ ನಿರ್ಮಾಣ. | 10.00 |
| 40 | ದಾವಣಗೆರೆ ತಾಲ್ಲೂಕ್ ನೀರ್ಥಡಿ ಕ್ಯಾಂಪ್ ಗ್ರಾಮದ ಎಸ್.ಟಿ. ಕಾಲೋನಿಯಲ್ಲಿ ಕಾಂಕ್ರೀಟ್ ರಸ್ತೆ ನಿರ್ಮಾಣ. | 10.00 |
| | ಲೆಕ್ಕಶೀರ್ಷಿಕೆ : 3054–03–337–0–05–200(ಯೋಜನೇತರ) ರಾಜ್ಯ ಹೆದ್ದಾರಿ ನಿರ್ವಹಣೆ | |
| 41 | ಜಗಳೂರು ತಾಲ್ಲೂಕು ಅರಭಾವಿ–ಚಳ್ಳಕೆರೆ ರಸ್ತೆ (ರಾಹೆ–45) ಕಿ.ಮೀ 278.35 ರಿಂದ 281.20,290.30 ರಿಂದ 296.62 ರವರೆಗೆ ವಾರ್ಷಿಕ ನಿರ್ವಹಣೆ(56563) | 6.20 |
| 42 | ಜಗಳೂರು ತಾಲ್ಲೂಕು ಮಲ್ಪೆ–ಮೊಳಕಾಲ್ಮೂರು ರಸ್ತೆ (ರಾಹೆ–65) ಕಿ.ಮೀ .286.50 ರಿಂದ 287.20,306.30 ರಿಂದ 307.75 ಮತ್ತು 321.95 ರಿಂದ 337.95ರವರೆಗೆ ವಾರ್ಷಿಕ ನಿರ್ವಹಣೆ(56081) | 9.00 |

| | 1 ಮತ್ತು 13ರ ಕಾಮಗಾರಿಗಳಿಗೆ | 41 ಮತ್ತು 42ರ ಕಾಮಗಾರಿಗಳಿಗೆ | ಉಳಿದ ಕಾಮಗಾರಿಗಳಿಗೆ |
|---|---|---|---|
| ಟೆಂಡರ್ ಸ್ವೀಕರಿಸಲು ಕೊನೆಯ ದಿನಾಂಕ | 22.10.2016 ಸಂಜೆ 4.00 ಗಂಟೆಯವರೆಗೆ | 17.09.2016 ಸಂಜೆ 4.00 ಗಂಟೆಯವರೆಗೆ | 29.09.2016 ಸಂಜೆ 4.00 ಗಂಟೆಯವರೆಗೆ |

ಹೆಚ್ಚಿನ ವಿವರಗಳನ್ನು ಸದರಿ ಕಛೇರಿಯ ಕೆಲಸದ ವೇಳೆಯಲ್ಲಿ (ದೂರವಾಣಿ : 08192 234951, 231530) ಅಥವಾ ವೆಬ್ ಸೈಟ್ http://eproc.karnataka.gov.in ನಲ್ಲಿ ಪಡೆಯಬಹುದು.

ಸಹಿ/– **ಕಾರ್ಯಪಾಲಕ ಇಂಜಿನಿಯರ್**, ಲೋಕೋಪಯೋಗಿ ಇಲಾಖೆ ವಿಭಾಗ, ದಾವಣಗೆರೆ.



**ಕಿಡ್ನಿ ಸ್ಟೋನ್**
ಮೂತ್ರಾಶ್ಮರಿ ಕರಗಿಸಲು ಆಯುರ್ವೇದ ಔಷಧಿಗಾಗಿ
ಸಂಪರ್ಕಿಸಿ
ಡಾ: ಮಹಾಂತಸ್ವಾಮಿ ಹಿರೇಮಠ
M.D. (Ayu)
9448157681



**ಲೈಂಗಿಕ ನಿಶ್ಶಕ್ತಿಯಿಂದಾ ಮುಕ್ತರಾಗಿರಿ!**
ಬೆಳಗಾವಿ : ಪ್ರತಿ ತಿಂಗಳು 4 ಹಾಗೂ 20,21
ವಿಜಯಪುರ : ಪ್ರತಿ ತಿಂಗಳು 5 ಹಾಗೂ 22,23
ಜಮಖಂಡಿ : ಪ್ರತಿ ತಿಂಗಳು 6 ರಂದು
Cell: 9343103492, 9844203873



**ಮಾನ್ಯ ಪ್ರಧಾನ ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳು ಜಮಖಂಡಿ ಇವರ ನ್ಯಾಯಾಲಯದಲ್ಲಿ**
ಅಪರಾಧಿಕ ಸಂಕೀರ್ಣ ಅರ್ಜಿ ಸಂಖ್ಯೆ ನಂ.301/2016

1. ಶ್ರೀಮತಿ ಗಂಗುಬಾಯಿ ಕೋಂ ಭೂಪಾಲ ಮಗದುಮ್ ಉರ್ಫ ದೊಡಮನಿ
...ಅರ್ಜಿದಾರಳು
: ವಿರುದ್ಧ :
1. ಮೆ ತಹಶೀಲದಾರ ಹಾಗೂ ಇನ್ನೊಬ್ಬರು
...ಎದುರುದಾರರು

**ಜಾಹೀರ ನೋಟಿಸ**

ಮೇಲ್ಕಾಣಿಸಿದ ಪ್ರಕರಣವನ್ನು ಅರ್ಜಿದಾರಳಾದ ಶ್ರೀಮತಿ ಗಂಗುಬಾಯಿ ಕೋಂ ಭೂಪಾಲ ಮಗದುಮ್ ಉರ್ಫ ದೊಡಮನಿ ಇವರು ತನ್ನ ಮಗನಾದ ಕುಮಾರ ಚಕ್ರವರ್ತಿ ತಂದೆ ಭೂಪಾಲ ದೊಡಮನಿ ಉರ್ಫ ಮಗದುಮ್ ಇವರು ದಿನಾಂಕ 07–02–2012 ರಂದು ಕಲಹಳ್ಳಿ ಗ್ರಾಮದಲ್ಲಿ ಮೃತರಾಗಿದ್ದು. ಎದುರುದಾರರ ಜನನ ಹಾಗೂ ಮರಣ ನೋಂದಣಿ ದಾಖಲೆಯಲ್ಲಿ ಮೃತರ ಮರಣ ದಾಖಲೆ ಇಲ್ಲದ ಕಾರಣ ಮರಣ ದಿನಾಂಕವನ್ನು ನೋಂದಣಿ ಮಾಡಿಕೊಂಡು ಮರಣ ಪ್ರಮಾಣ ಪತ್ರ ಪೂರೈಸಲು ಎದುರುದಾರರಿಗೆ ನಿರ್ದೇಶನ ಕೋರಿ ಅರ್ಜಿಯನ್ನು ಸಲ್ಲಿಸಿರುತ್ತಾರೆ. ಸದರಿ ಅರ್ಜಿಗೆ ಯಾರಾದರೂ ತಕರಾರು ವೈಗೆರೆ ಇದ್ದಲ್ಲಿ ಖುದ್ದಾಗಿ ವ ವಕೀಲರ ಮುಖಾಂತರ ದಿನಾಂಕ 17–10–2016 ರಂದು ಮುಂಜಾನೆ 11–00 ಘಂಟೆಗೆ ಈ ನ್ಯಾಯಾಲಯಕ್ಕೆ ಹಾಜರಾಗಿ ತಮ್ಮ ಹೇಳಿಕೆ ದಾಖಲಿಸತಕ್ಕದ್ದು. ತಪ್ಪಿದಲ್ಲಿ ದಾಖಲಾತಿಗಳ ಆಧಾರದ ಮೇಲೆ ಪ್ರಕರಣ ಇತ್ಯರ್ಥಪಡಿಸಲಾಗುವದು ಅಂತಾ ನೀಡಿದ ಜಾಹೀರ ನೋಟಿಸ.

ಇಂದು ದಿನಾಂಕ 29–08–2016 ರಂದು ಕೋರ್ಟಿನ ಮೊಹರು ಹಾಗೂ ಸಹಿಯೊಂದಿಗೆ ಕೊಡಲ್ಪಟ್ಟಿತ್ತು.
ಸ್ಥಳ: ಜಮಖಂಡಿ
ದಿನಾಂಕ: 29–08–2016

ಸಹಿ/– ಶಿರಸ್ತೆದಾರರು
ಜೆ ಎಮ್ ಎಫ್ ಸಿ ನ್ಯಾಯಾಲಯ, ಜಮಖಂಡಿ
ಸಹಿ/– ಶ್ರೀ ಪಿ.ಪಿ. ನಂದಗಾಂವ
ವಕೀಲರು, ಜಮಖಂಡಿ



**ವಾಯವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ, ಕಾಮಗಾರಿ ಉಪ–ವಿಭಾಗ ಬಾಗಲಕೋಟ.**

**ಬಹಿರಂಗ ಹರಾಜು ಪ್ರಕಟಣೆ**

ಕುಳಗೇರಿ ಕ್ರಾಸ್‌ನಲ್ಲಿ ಹಳೆಯ ಬಸ್ ನಿಲ್ದಾಣದ ಕಟ್ಟಡವನ್ನು ಕೆಡವಿ ಹಾಕುವುದು ಮತ್ತು ಕಟ್ಟಡದ ಸಾಮಗ್ರಿಗಳನ್ನು ಹೊರ ಸಾಗಿಸುವ ಬಹಿರಂಗ ಹರಾಜು **ದಿನಾಂಕ : 06–09–2016** ರಂದು **ಸಮಯ 11.00 ಘಂಟೆಗೆ** ಕುಳಗೇರಿ ಬಸ್ ನಿಲ್ದಾಣದ ಆವರಣದಲ್ಲಿ ಹಮ್ಮಿಕೊಳ್ಳಲಾಗಿದ್ದು ಆಸಕ್ತರು ಭದ್ರತಾ ಠೇವಣಿ **ರೂ. 2770.00** ಗಳನ್ನು ಸ್ಥಳದಲ್ಲಿಯೇ ಭರಣಾ ಮಾಡಿ ಭಾಗವಹಿಸಬಹುದಾಗಿದೆ.

ಸಹಿ/– **ವಿಭಾಗೀಯ ನಿಯಂತ್ರಣಾಧಿಕಾರಿ**
ವಾ.ಕ.ರ.ಸಾ.ಸಂಸ್ಥೆ, ಬಾಗಲಕೋಟ ವಿಭಾಗ.



**KRISHNA BHAGYA JALA NIGAM LIMITED**
(A GOVT.OF KARNATAKA UNDERTAKING)
**OFFICE OF THE EXECUTIVE ENGINEER, KBJNL.**
**NLBC DIVISION, RODALABANDA.**
No.KBJNL/NLBC/PB-1/2016-17/614 Date:- 31.8.2016

**CORRIGENDUM NOTIFICATION(4)**

Ref:-1) This office Tender Notification No.KBJNL/NLBC/PB/2016-17/214 dtd. 8.6.2016
2) This office Corrigendum Notification NoKBJNL /NLBC /PB / 2016 -17/281 dtd. 22.6.2016.
3) This office Corrigendum Notification No.KBJNL/NLBC/PB/2016-17/421 dtd. 19.7.2016.
4) This office Corrigendum Notification No.KBJNL/NLBC/PB/2016-17/563 dtd. 18.8.2016

With reference to the above Tender Notification of RFP published from this office has been postponed due to technical reasons. The name of the work has been modified as **SURVEY, INVESTIGATION, PLANNING, DESIGN, ENGINEERING, FINANCING, PROCUREMENT, SUPPLY, ERECTION, TESTING, INSTALLATION, COMMISSIONING AND COMPREHENSIVE OPERATION AND MAINTENANCE AND TRANSFER OF 10 MW SOLAR PV PLANT ON KOPPAL LIS STAGE – II LEAD OF CANAL NEAR ILKAL TOWN, HUNGUNDA TALUK BAGALKOT DIST KARNATAKA STATE UNDER PUBLIC PRIVATE PARTNERSHIP (PPP) MODE FOR 25 YEARS ON DBFOT BASIS.**

The calendar events of tender (Date &time schedule) and RFP documents are modified and uploaded in the e-procurement portal.

pre bid meeting will be held on :: 09.09.2016 @ 11.30 AM
Last date of submission of RFP tender through e-procurement is on :: 24.9.2016 Upto4.00 PM
Opening of technical bid is on :: 26.9.2016 @ 4.30 PM
Opening of financial bid is on :: 01.10.2016@ 11.00 AM

The other terms and conditions are as mentioned in the modified RFP document.

Sd/-
Executive Engineer,
KBJNL NLBC Division, Rodalabanda.



**PUBLIC NOTICE**
**For the lost of original Sale deed**

Be it known to the public at large that, my client has mis placed/lost original sale deed dated 12/12/2006 bearing document no.BEL-1-07213-2006-07 registered with the office of the Sub Registrar Belgaum executed by Shri Yallappa Nagappa Naik @ Shahapurkar in favour of Shri Ravindra Nivrutti Patil in respect of property comprised in NA open site undeveloped Plot No.63, from out of RS No. 118, measuring 9 Mtrs X 15 Mtrs = 135 Sq Mtrs = 1.37 guntas, situated at Samruddi Colony, Anand Nagar, Vadagaon, Belgaum.

Therefore if anybody found the above original Sale deed may be handed over or inform to the undersigned.
Place: Belgaum
Date : September 4, 2016

**Sd/- Mahaveer A Magdum**
**Advocate**
**C/o: Vakratund building, Chavat galli, near nana Patil chowk, Belgaum**
**Ph.No. 9844212941**



**ವ್ಯಸನ ಮುಕ್ತಿ ಲೈಂಗಿಕ ಸಮಸ್ಯೆ**
ಶೀಘ್ರಸ್ಖಲನ, ನಪುಂಸಕತೆ, ಹಸ್ತಮೈಥುನ, ಅಶಕ್ತತೆ, ಸಿಗರೇಟ, ತಂಬಾಕು, ದಾರು ಬಿಡಿಸುವ ಮಾತ್ರೆ ಸಿಗುತ್ತವೆ. ಅವಶ್ಯಕತೆ ಅನುಸಾರ ರೋಗಿಗಳನ್ನು ದಾಖಲಿಸಿ ಕೊಳ್ಳಲಾಗುವುದು.
**ನಿರ್ಮಲ ಹಾಸ್ಪಿಟಲ್ ವ್ಯಸನ ಮುಕ್ತಿ ಕೇಂದ್ರ**
ರೈಲ್ವೆ ಸ್ಟೇಶನ ಹತ್ತಿರ ಮಿರಜ ಜಿ: ಸಾಂಗಲಿ (ಮಹಾರಾಷ್ಟ್ರ)
ಫೋನ: 0233-2225060, 09922646566
ಭೇಟಿ: ವೇಳೆ: 11 ರಿಂದ 6
ಚಿಕ್ಕೋಡಿ : ವಿಜಯಾ ಬ್ಯಾಂಕ ಹತ್ತಿರ, ಶನಿವಾರ ದಿ. 17 ಸಪ್ಟೆಂಬರ್ 10 ರಿಂದ 1 ಗಂಟೆ.
ಜಮಖಂಡಿ : ಮು.ಪೋ.: ಹೊನ್ನೂರ, ಬಸ್ ಸ್ಟ್ಯಾಂಡ್ ಹತ್ತಿರ ಕೆನರಾ ಬ್ಯಾಂಕ ಬಿಲ್ಡಿಂಗ್. ರವಿವಾರ ದಿ. 18 ಸಪ್ಟೆಂಬರ್ 10 ರಿಂದ 2 ಗಂಟೆ.
ಅಥಣಿ : ಶಾಂತಿಸಾಗರ ಹಾಟೇಲ್ ಹಿಂದೆ, ಡಾ. ರವೀಂದ್ರ ಪಾಟೀಲ ಆಸ್ಪತ್ರೆ. ರವಿವಾರ ದಿ. 18 ಸಪ್ಟೆಂಬರ್ 3 ರಿಂದ 6 ಗಂಟೆ.

